Sri K. V. SHANKARA GOWDA (Minister for Agriculture and Education).—Sir, With reference to the call attention notice, I beg to state :

Although the seasonal conditions started well in the beginning of monsoon season there was long break during the months of August and September and again in October. As a result Groundnut crop suffered considerably during the flowering and fruiting stage for want of moisture. Chilly crop also has suffered to a certain extent in this Taluka. The crop of wheat was also reported to be below normal. It is true that heavy rainfall occurred in 3rd week of February in the villages mentioned. Cotton, Toor and Safflower were standing in the field at the time. Wheat was in threshing floor, fodder was still to be stacked. It is reported that there is damage to the standing crops to the extent of 10 to 20 per cent. Fooder which was lying outside has not been completely spoiled but quality would be affected to certain extent. The exact assessment could be made and if necessary, scarcity works could be taken up in the areas if declared as scarcity affected villages.

Mr. DEPUTY SPEAKER.—Next, half-an-hour discussion regarding land revenue and surcharge. Mr. Devegowda.

HALF AN HOUR DISCUSSION ARISING OUT OF REPLIES TO STARRED QUESTION NO. 79 TAKEN ON 2nd MARCH 1968 *re*: REMISION OF LAND REVENUE AND SURCHARGE.

† ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಪತಿಗಳೇ, ಇದೇ ಸಭೆಯಲ್ಲಿ 7ನೇ ಪಟ್ಟಿಯಲ್ಲಿ 79ನೇ ಸ್ಟಾರ್ಡ್ ಪ್ರಶ್ನೆಗೆ ರೆವಿನ್ಯೂ ಮಂತ್ರಿಗಳು ಕೊಟ್ಟಂಥ ಉತ್ತರದ ಮೇಲೆ ಕೆಲವೊಂದು ಅನುಮಾನವನ್ನು ಪರಿಹರಿಸಿಕೊಳ್ಳಲು ಈ ಅರ್ಧಗಂಟೆ ಕಾಲದ ಚರ್ಚೆಯನ್ನು ಪ್ರಾರಂಭಿಸಬೇಕೆಂದು ಹೇಳಿ ತಮಗೆ ಮನವಿ ಮಾಡಿಕೊಂಡದ್ದರ ಮೇಲೆ ತಾವು ಅವಕಾಶ ಕೊಟ್ಟಿದ್ದೀರಿ. ಇದರಲ್ಲಿರತಕ್ಕ ಅನುಮಾನವಾದರೂ ಇ ಸ್ವಿ. 1962-63, 63-64, 64-65, 65-66 66-67, ನೇ ಸಾಲಿನಲ್ಲಿ ತಾವು ರಾಜ್ಯದಾದ್ಯಂತ ಎಷ್ಟೆಷ್ಟು ಭೂಕಂದಾಯದ ರಿಮಿಷನ್ ಮತ್ತು ಸರ್ಚಾರ್ಜ್ ವಜಾಮಾಡಿದ್ದೀರಿ ಎಂಬುದನ್ನು ಸ್ಟಾರ್ಡ್ ಪ್ರಶ್ನೆಯ ಮುಖೇನ ಸರ್ಕಾರದಿಂದ ಉತ್ತರ ಪಡೆಯಲು ಪ್ರಯತ್ನ ಪಟ್ಟಂತಹ ಕಾಲದಲ್ಲಿ ಮಂತ್ರಿಗಳು ಒದಗಿಸಿರತಕ್ಕ ಉತ್ತರ ಏನಿದೆ ಅದರ ಪ್ರಕಾರ ಮೈಸೂರು ರಾಜ್ಯದಲ್ಲಿ ಸುಮಾರು 62 ಲಕ್ಷದ ನಾಲ್ಕುನೂರಾ 82 ರೂಪಾಯಿ ಲ್ಯಾಂಡ್ ರೆವಿನ್ಯೂ ಮನ್ನಾ ಮಾಡಿದ್ದೀರಿ. ಅದರಲ್ಲಿ ಹಳೇ ಮೈಸೂರಿನಲ್ಲಿ 11 ಲಕ್ಷದ 64 ಸಾವಿರದ 881 ರೂಪಾಯಿಗಳನ್ನು ತಾವು ಮಾಫಿ ಮಾಡಿದ್ದೀರಿ. ಅದರಲ್ಲಿ ಹಾಸನ ಜಿಲ್ಲೆಯಲ್ಲಿ ಮನ್ನಾ ಮಾಡಿರುವುದು ಎಷ್ಟು ಎಂದರೆ 552 ರೂಪಾಯಿ. ಹಾಗೆಯೇ ಸರ್ಚಾರ್ಜ್ ಇಡೀ ರಾಜ್ಯದಲ್ಲಿ 9 ಲಕ್ಷದ 40 ಸಾವಿರದ 91 ರೂಪಾಯಿ ಮಾಫಿ ಮಾಡಿದ್ದೀರಿ, ಅದರಲ್ಲಿ ಹಳೇ ಮೈಸೂರಿನಲ್ಲಿ 1 ಲಕ್ಷದ 32 ಸಾವಿರದ 723 ರೂಪಾಯಿಗಳನ್ನು ಮಾಫಿ ಮಾಡಿದ್ದೀರಿ, ಮತ್ತು ಅದರಲ್ಲಿ ಹಾಸನ ಜಿಲ್ಲೆಯಲ್ಲಿ 552 ರೂಪಾಯಿಗಳನ್ನು ಮಾಫಿ ಮಾಡಲಾಗಿದೆ ಎಂದು ಉತ್ತರ ಕೊಡತಕ್ಕ ಕಾಲದಲ್ಲಿ ತಿಳಿಸಿದ್ದೀರಿ. ಸಮನ್ವಯವಾದ ಕಾನೂನು ಇರಲಿಲ್ಲ. ಮತ್ತು ಹಳೇ ಮೈಸೂರಿನಲ್ಲಿ ಭೂಕಂದಾಯವನ್ನು ರದ್ದು ಮಾಡತಕದ್ದರ ಬಗ್ಗೆ ಕ್ಷಾಮ ಪೀಡಿತ ಪ್ರದೇಶವಾದರೆ ಅವಕ್ಕೆ ಒಂದು ಸೌಲತ್ತನ್ನು ಕೊಡಬೇಕಾದರೆ ಕಾನೂನಿನ ಅಡಚಣೆ ಇದ್ದುದರಿಂದ ಆ ಒಂದು ಬೆನಿಫಿಟ್‌ನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು ತಿಳಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಯಾವ ಅಪಾದನೆಯನ್ನೂ ಮಾಡುತ್ತಿಲ್ಲ, ಏಕೆಂದರೆ ತಾವು ಬೆನಿಫಿಟ್ ಕೊಡಬೇಕೆಂಬ ಉದ್ದೇಶದಿಂದಲೇ ಪುನರ್ವಿಮರ್ಶಿತವಾದ ರೂಲ್ಸ್‌ನ್ನು ಮಾಡುತ್ತಾ ಇದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಆದರೆ ಆಡಳಿತ ನಿರ್ವಹಣೆ ಮಾಡತಕ್ಕ ಕಾಲದಲ್ಲಿ ಆಧಾರ ರಹಿತವಾದ

(ಶ್ರೀ ಎಚ್. ಡಿ. ದೇವೇಗೌಡ)

ಉತ್ತರವನ್ನು ಕೊಟ್ಟಿದ್ದೀರಿ ಎಂಬುದರ ಕಡೆಗೆ ತಮ್ಮ ಗಮನವನ್ನು ಸೆಳೆಯುತ್ತಾ ಇದ್ದೇನೆ. ಹಳೇ ಮೈಸೂರಿನ, ಚಿಕ್ಕಮಗಳೂರು, ಶಿವಮೊಗ್ಗ, ಮಂಡ್ಯ, ಮೈಸೂರು, ಕೋಲಾರ ಈ ಜಿಲ್ಲೆಗಳಿಗೆ ಯಾವ ಯಾವ ಸೌಲತ್ತುಗಳನ್ನು ಕೊಡುವುದಕ್ಕೆ ಅವಕಾಶವಾಯಿತೋ ಅದೇ ಕಾನೂನಿನ ಚೌಕಟ್ಟಿನೊಳಗೆ ಹಾಸನ ಜಿಲ್ಲೆಗೂ ಕೂಡ ಏಕೆ ಆ ಸೌಲತ್ತುಗಳನ್ನು ಕೊಡಬಾರದಾಗಿತ್ತು? ಹಾಸನ ಜಿಲ್ಲೆಯವರು ಮಾಡಿದ ಪಾಪ ಏನು? ಈ ಬಗ್ಗೆ ಒಂದು ಸಂಶಯ ಇದೆ. ಯಾವ ಒಂದು ಕಾನೂನು ಹಾಸನ ಜಿಲ್ಲೆಗೆ ಆ ಒಂದು ಸೌಲತ್ತನ್ನು ಕೊಡುವುದಕ್ಕೆ ಅಡ್ಡಿಯಾಯಿತು ಎಂಬುದನ್ನು ತಾವು ತಿಳಿಸಬೇಕು. ಆ ರೀತಿ ಇದ್ದ ಪಕ್ಷದಲ್ಲಿ ಅದೇ ಕಾನೂನಿನ ಚೌಕಟ್ಟಿನೊಳಗಿರತಕ್ಕ ಹಳೇ ಮೈಸೂರಿನ ಉಳಿದ ಜಿಲ್ಲೆಗಳಿಗೆ ಆ ಸೌಲತ್ತುಗಳನ್ನು ಕೊಡುವುದಕ್ಕೆ ಹೇಗೆ ಸಾಧ್ಯವಾಯಿತು? ಉತ್ತರ ಕೊಡತಕ್ಕ ಕಾಲದಲ್ಲಿ ಸಮನ್ವಯವಲ್ಲದೇ ಇರತಕ್ಕ ಉತ್ತರವನ್ನು ಕೊಡಲಾಗಿದೆ ಎಂಬುದು ನನ್ನ ತೀವ್ರತರವಾದ ಅಕ್ಷೇಪಣೆ. ಸ್ವಾಮಿ, ಸುಮಾರು 8 ಲಕ್ಷ ರೂಪಾಯಿಗಳ ಕಂದಾಯವನ್ನು ಹಾಸನ ಜಿಲ್ಲೆಯಲ್ಲಿ ರೆಮಿಷನ್ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಶಿಫಾರಸು ಮಾಡಿ ಕಳುಹಿಸಿದ್ದಾರೆ. ಅದು ಏನಾಯಿತು? ಹಾಗಿದ್ದರೂ ಕೂಡ ಕಂದಾಯ ವಸೂಲು ಮಾಡಲು ಉಗ್ರವಾದ ಕಾರ್ಯಕ್ರಮ ತೆಗೆದುಕೊಂಡಿರತಕ್ಕ ನಿದರ್ಶನ ಇದೆ ಇದಕ್ಕೆ ಕಾರಣವೇನು? ಶ್ರೀಮಾನ್ ಜ್ವಾಲನಯ್ಯನವರು ಒಂದು ಸಾರಿ ಹೇಳುತ್ತಾ ಇದ್ದರು, ಹಾಸನ ಜಿಲ್ಲೆಯಲ್ಲಿ ಬರೀ ಅಪೋಸಿಷನ್‌ನವರು ಆರಿಸಿ ಬಂದಿದ್ದಾರೆ ಅಂತ ಈ ರೀತಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ ಅಂತ ಆ ರೀತಿ ಮೋಟೀವ್ ಅಟ್ರಿಬ್ಯೂಟ್ ಮಾಡುವುದಕ್ಕೆ ನಾವು ಹೋಗುವುದಿಲ್ಲ. ಇವತ್ತು ರಾಜ್ಯಾಡಳಿತ ನಡೆಸತಕ್ಕ ಕಾಲದಲ್ಲಿ ಪಕ್ಷಾತೀತ ಭಾವನೆ ಇರಬೇಕು ಎಂಬುದನ್ನು ತಿಳಿಸಿ, ಹೊಳೇನರಸೀಪುರದ 93 ಗ್ರಾಮಗಳನ್ನು ಕ್ಷಾಮ ಪೀಡಿತ ಪ್ರದೇಶ ಎಂದು ಡಿಕ್ಲೇರ್ ಮಾಡಿದ ಪ್ರದೇಶಗಳಲ್ಲಿ ಸೇರಿಸಿ ಏಕೆ ಮನ್ನಾ ಮಾಡುವುದಕ್ಕೆ ಆಗಲಿಲ್ಲ, ಎಂಬ ವಿಷಯವನ್ನು ಕೇಳುತ್ತಾ ಇದ್ದೇನೆ. ಇದಕ್ಕೆ ಕಾರಣವೇನು? ಇದು ಬಹಳ ಶೋಚನೀಯವಾದ ವಿಷಯ. ಹಾಸನ ಜಿಲ್ಲೆಯಲ್ಲಿ 62—63 ರಿಂದ 66—67ರವರೆಗೂ 4 ಆಣೆಗಿಂತ ಕಮ್ಮಿ ಬೆಳೆಯಾಗಿರತಕ್ಕ ಪ್ರದೇಶ ಯಾವ್ಯಾವುದು ಇದೆ ಎಂಬ ಒಂದು ವರದಿಯನ್ನು ತರಿಸಿಕೊಳ್ಳಬೇಕೆಂದು ಹೇಳುತ್ತೇನೆ. ಈಗಾಗಲೇ ಜಿಲ್ಲಾಧಿಕಾರಿಗಳು ಕಳುಹಿಸಿದ್ದಾರೆ ಎಂದು ಕೇಳಿದ್ದೇನೆ. 8 ಲಕ್ಷ ರೂಪಾಯಿಗಳನ್ನು ಮನ್ನಾ ಮಾಡುತ್ತೀರಿ ಎಂಬ ಭರವಸೆಯನ್ನು ತಮ್ಮಿಂದ ನಿರೀಕ್ಷಣೆ ಮಾಡಿ ನನ್ನ ಮಾತನ್ನು ಪೂರೈಸುತ್ತೇನೆ.

1-30 P.M.

† ಶ್ರೀ ದಿಗಂಬರರಾವ್ ಬಿ. ಕಲಮಂಕರ್.—ಅಧ್ಯಕ್ಷರೇ, ಇವತ್ತು ನಾವು ಚರ್ಚೆ ಮಾಡುತ್ತಿರುವ ಮುಖ್ಯ ಕಾರಣ, ಎಲ್ಲಾ ಜಿಲ್ಲೆಗಳ ಪೈಕಿ ರಾಯಚೂರು ಜಿಲ್ಲೆಯಲ್ಲಿ ಪರಿಸ್ಥಿತಿ ಚೆನ್ನಾಗಿದೆಯೆಂದು ಹೇಳಿದ್ದು ಆಗಿದೆ. 5 ವರ್ಷಗಳ ಕಾಲದಲ್ಲಿ ಲ್ಯಾಂಡ್ ರೆವಿನ್ಯೂ ಬಾಕಿ ಇರುವುದು, 1 ಕೋಟಿ 20 ಲಕ್ಷ 93 ಸಾವಿರದ 940 ರೂಪಾಯಿಗಳು. ಆದರೆ ಬಿಜಾಪುರ ಜಿಲ್ಲೆಯಲ್ಲಿ ಕ್ಷಾಮ ಇರುತ್ತದೆ. ಅಲ್ಲಿ ಬಹಳ ಕಡಿಮೆ ಬಾಕಿ ಇರುವುದು ಎಂದು ಹೇಳುತ್ತಾರೆ. ಇದಕ್ಕೆ ಏನು ಕಾರಣವಿರಬಹುದು ಎಂಬ ಬಗ್ಗೆ ರೆವಿನ್ಯೂ ಮಂತ್ರಿಗಳು ಹೇಳಬೇಕು. ಏಕೆಂದರೆ, ರಾಯಚೂರಿನಲ್ಲಿ ವಾಸ್ತವಿಕ ಪರಿಸ್ಥಿತಿ ದೃಷ್ಟಿಯಿಂದ ನೋಡಿದರೆ ಅಲ್ಲಿ ಅಷ್ಟು ಬಾಕಿ ಇರಬಾರದು. ಅಲ್ಲಿರತಕ್ಕ ಬಾಕಿಯನ್ನು ವಸೂಲುಮಾಡುವುದರಲ್ಲಿ ಅಲ್ಲಿನ ಅಧಿಕಾರಿಗಳು ಸರಿಯಾಗಿ ಕೆಲಸಮಾಡದೇ ಇರುವುದರಿಂದ ಅಷ್ಟು ಬಾಕಿ ಅಲ್ಲಿ ಇದೆ. ಬಿಜಾಪುರ ಬರಗಾಲ ಏರಿಯಾ ಆಗಿದೆಯೆಂದು ಹೇಳುತ್ತಾರೆ. ಅದರಿಂದಲೇ ಅಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸಮಾಡಲಿಲ್ಲವೆಂದು ನನಗನ್ನಿಸುತ್ತದೆ. ಎರಡನೆಯದಾಗಿ, 5 ವರ್ಷಗಳ ಬಾಕಿ ಲ್ಯಾಂಡ್ ರೆವಿನ್ಯೂನಲ್ಲಿ, 6 ಕೋಟಿ 42 ಲಕ್ಷ 45 ಸಾವಿರದ 683 ರೂಪಾಯಿಗಳು. ಸರ್‌ಚಾರ್ಜು 1 ಕೋಟಿ 39 ಲಕ್ಷ 87 ಸಾವಿರದ 229 ರೂಪಾಯಿಗಳು. ಆಂದಮೇಲೆ ಒಟ್ಟು ಸುಮಾರು 7-8 ಕೋಟಿ ರೂಪಾಯಿಗಳ ಬಾಕಿ ಇದೆ. ಈ ಬಾಕಿಯನ್ನು ಸಂಬಂಧಪಟ್ಟ ಇಲಾಖೆಯಿಂದ ವಸೂಲುಮಾಡಲಿಲ್ಲ. ಅದಕ್ಕೆ ಎರಡು ಕಾರಣಗಳಿವೆ. ಒಂದು ಕಡೆ ಅಧಿಕಾರಿಗಳಿಗೆ ಕೆಲಸ ಬರುವುದಿಲ್ಲ, ಅವರು ಚೆನ್ನಾಗಿ ಕೆಲಸಮಾಡುವುದಿಲ್ಲ. ಬಾಕಿಯನ್ನು ಸ್ಮಾಲ್ ಲ್ಯಾಂಡ್ ಹೋಲ್ಡರ್ಸ್ ಯಾರೂ ಕೊಡುವುದಕ್ಕಾಗುವುದಿಲ್ಲ. ಅಂತಹವರೇ ಜಾಸ್ತಿ ಕೊಡುವುದು ಇರಬಹುದು. ಅದರ ಬಗ್ಗೆ ರೆವಿನ್ಯೂ ಮಂತ್ರಿಗಳು ವಾಸ್ತವಿಕ ಪರಿಸ್ಥಿತಿ ಏನಿದೆಯೆಂಬುದನ್ನು ಹೇಳಬೇಕು. ಈಗಾಗಲೇ 62 ಲಕ್ಷ 2 ಸಾವಿರದ 487 ರೂಪಾಯಿಗಳನ್ನು ರೈಟ್ ಆಫ್ ಮಾಡಿದ್ದಾರೆ. ಸರ್‌ಚಾರ್ಜು ಇನ್ನೂ ಕಡಿಮೆ ಇದೆ. ಸಣ್ಣ ಸಣ್ಣ ಲ್ಯಾಂಡ್ ಹೋಲ್ಡರ್ಸ್ ಬಗ್ಗೆ ಅಷ್ಟಾಗಿ ಈಗ ಬಾಕಿ ಇಲ್ಲದೇ ಇರುವುದರಿಂದ, ಅವರು ಕೊಡತಕ್ಕ ಲ್ಯಾಂಡ್ ರೆವಿನ್ಯೂ ಬಾಕಿಯನ್ನು ತೆಗೆದುಹಾಕಬೇಕು. ಏಕೆಂದರೆ ಅವರು

ಕೊಡುವುದಕ್ಕಾಗುವುದಿಲ್ಲ. ಅವರಿಗೆ ಪೂರ್ತಿ ರೈಟ್ ಆಫ್ ಮಾಡುವ ಬಗ್ಗೆ ಒಂದು ನಿರ್ಣಯವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಲ್ಯಾಂಡ್ ರೆವಿನ್ಯೂ ಬಗ್ಗೆ ಸರ್ಕಾರದವರು ವಿಚಾರಮಾಡಿ ಕೇವಲ 5-10 ಎಕರೆಗಳಿಗಿಂತ ಕಡಿಮೆ ಇರುವವರಿಗೆ ಲ್ಯಾಂಡ್ ರೆವಿನ್ಯೂ ಬಾಕಿಯನ್ನು ತೆಗೆದು ಹಾಕಬೇಕು ಎಂದು ಹೇಳಿ ನಾನು ಇದನ್ನು ವಿರೋಧಿಸುತ್ತೇನೆ.

† ಶ್ರೀ ಜಿ. ಬಿ. ಶಂಕರ ರಾವ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಲ್ಯಾಂಡ್ ರೆವಿನ್ಯೂಗೆ ಸಂಬಂಧಪಟ್ಟಹಾಗೆ ಕೆಲವು ಉಪಪ್ರಶ್ನೆಗಳನ್ನು ಕೇಳುವಾಗ ಸ್ವಲ್ಪ ಕನ್‌ಫ್ಯೂಷನ್ ಮಾಡಿಕೊಂಡು ಲ್ಯಾಂಡ್ ರೆವಿನ್ಯೂ ಕಂದಾಯದ ಬಗ್ಗೆ ಮತ್ತು ಅದನ್ನು ವಜಾ ಮಾಡುವ ಬಗ್ಗೆ ದ್ವಂದ್ವ ಪರಿಸ್ಥಿತಿಯನ್ನುಂಟುಮಾಡಿಕೊಂಡು ಕೆಲವು ಜಿಲ್ಲೆಗಳಿಗೆ ಆ ಕಂದಾಯವನ್ನು ರೈಟ್ ಆಫ್ ಮಾಡಿದ್ದಾರೆ, ಇನ್ನು ಕೆಲವು ಜಿಲ್ಲೆಗಳಿಗೆ ರೈಟ್ ಆಫ್ ಮಾಡಿಲ್ಲವೆಂಬುದಾಗಿ ಹೇಳಿದ್ದಾರೆ. ಆದರೆ ಕಂದಾಯ ರೈಟ್ ಆಫ್ ಮಾಡುವುದು ಬಹಳ ಕಡಿಮೆ. ಕಾನೂನು ಪ್ರಕಾರ ಕಂದಾಯವನ್ನು ವಸೂಲುಮಾಡುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ, ರೈಟ್ ಆಫ್ ಮಾಡುವುದು. ಕೆಲವುಕಡೆ ಹೈದರಾಬಾದ್ ಕರ್ಣಾಟಕದಲ್ಲಿ ಬಿದರೆ ಜಿಲ್ಲೆಯಲ್ಲಿ ಕಂದಾಯ ರೂಪದಲ್ಲಿ ಸರ್ಕಾರಕ್ಕೆ ಬರುವ ಬಾಕಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ವಜಾ ಮಾಡಿದೆ. ಅದಕ್ಕೆ ವಿಶೇಷವಾದಂಥ ಕಾರಣಗಳು ಉಂಟು. ಅದಕ್ಕೆ ರಾಜಕೀಯ ಕಾರಣಗಳು ಇಲ್ಲ. ಕರ್ಣಾಟಕ ರಾಜ್ಯವಾಗುವ ಕಾಲದಲ್ಲಿ ಹೈದರಾಬಾದ್ ಕರ್ಣಾಟಕದ ಕೆಲವು ಜಿಲ್ಲೆಗಳಲ್ಲಿ ಸಣ್ಣ ಸಣ್ಣ ಜಹಗೀರುಗಳು ಇದ್ದವು. ಅಲ್ಲಿ ಇನಾಂದಾರರೂ ಇದ್ದಾರೆ. ಈಗ ರೈತರು ಸರ್ಕಾರಕ್ಕೆ ಕೊಡುವ ಕಂದಾಯದ ಎರಡರಷ್ಟು ಬಾಕಿಯಾಗುತ್ತದೆ.

ಶ್ರೀ ಎಚ್. ಡಿ. ದೇವೇ ಗೌಡ.—ಹೈದರಾಬಾದ್ ಕರ್ಣಾಟಕದಲ್ಲಿ ಸಣ್ಣ ಸಣ್ಣ ಜಹಗೀರುದಾರರು ಕೆಲವು ಸಂದಿಗ್ಧಪರಿಸ್ಥಿತಿಯಲ್ಲಿದ್ದಾರೆಂದು ಮಾನ್ಯ ಉಪಮಂತ್ರಿಗಳು ಉತ್ತರವನ್ನು ಮುಂದುವರಿಸುತ್ತಿದ್ದಾರೆ. 1956 ರಲ್ಲಿ ಪ್ರಾಂತ ಪುನರ್ವಿಂಗಡಣೆಯಾದಾಗ ಅಲ್ಲಿನ ಕರ್ಣಾಟಕದಲ್ಲಿ ಆದಂತ ವಿಷಯವೇ ಬೇರೆ.

ಶ್ರೀ ಕೆ. ವಿ. ಶಂಕರ ಗೌಡ.—ಹಿಂದೆ ಅಲ್ಲಿನ ಇನಾಂ ಹಳ್ಳಿಗಳಲ್ಲಿರತಕ್ಕ ರೈತರಿಗೂ ಈ ರಾಜ್ಯದ ಹಳ್ಳಿಗಳಲ್ಲಿರತಕ್ಕ ರೈತರಿಗೆ ಹಾಕುವ ಕಂದಾಯದಷ್ಟೇ ಹಾಕಬೇಕೆಂಬುದು ಆ ಸರ್ಕಾರದ ಪರಿಶೀಲನೆಯಲ್ಲಿತ್ತು. ಕರ್ಣಾಟಕವಾಗುವುದಕ್ಕೆ ಮುಂಚೆ ಹೈದರಾಬಾದ್ ಸರ್ಕಾರದವರು ಅದನ್ನು ಪರಿಶೀಲನೆಮಾಡುತ್ತೇವೆಂದು ಒಪ್ಪಿಕೊಂಡಿದ್ದರು. ಆದರೆ ಇದುವರೆಗೆ ಅಲ್ಲಿ ಕಂದಾಯವನ್ನು ವಜಾಮಾಡಲಿಲ್ಲ. ರೀಜನಲ್ ಸೆಟಲ್‌ಮೆಂಟ್ ನಡೆಯದೇ ಇದ್ದುದರಿಂದ, ಅದು ಮುಂದುವರಿದು ಕರ್ಣಾಟಕ ಪ್ರಾಂತ ರಚನೆಯಾದಮೇಲೂ 1962 ರವರೆಗೆ ಅದನ್ನು ವಜಾಮಾಡಲಿಕ್ಕೆ ಸಾಧ್ಯವಾಗಿಲ್ಲ. ನಂತರ ಹಿಂದಿನ ಸರ್ಕಾರ ಯಾವ ವಿಷಯದಲ್ಲಿ ಭರವಸೆ ಕೊಟ್ಟಿತ್ತೋ, ಅದನ್ನು ಪಾಲಿಸಬೇಕೆಂಬ ಉದ್ದೇಶದಿಂದ, ಬಿದರ್ ಜಿಲ್ಲೆಯಲ್ಲಿ ಅಂತಹ ವಿಶೇಷ ಪರಿಸ್ಥಿತಿ ಇದ್ದುದರಿಂದ ಕಂದಾಯ ಅಲ್ಲಿ ವಜಾ ಮಾಡಲಾಗಿದೆ. ಮಾನ್ಯ ಶ್ರೀ ಕರ್‌ಮಂಕರ್ ಅವರು ರಾಯಚೂರು ಮತ್ತು ಗುಲ್ಬರ್ಗಾಗಳಲ್ಲಿಯೂ ಅದೇ ರೀತಿ ಉಂಟು ಎಂದು ಹೇಳಿದ್ದಾರೆ. ಆದರೆ ಅಲ್ಲಿನ ಇನಾಂ ಜಮೀನ್ದಾರರಿಂದ ಆ ರೀತಿ ಸರ್ಕಾರಕ್ಕೆ ಮನವಿಗಳು ಬರಲಿಲ್ಲ. ಅಷ್ಟೊಂದು ದೊಡ್ಡ ಪ್ರಮಾಣದ ಹಣವನ್ನು ಆ ಸರ್ಕಾರ ವಜಾ ಮಾಡಬೇಕಾಗಿತ್ತು, ಇನ್ನೂ ಕೆಲವು ಕಡೆಗಳಲ್ಲಿ ಕಂದಾಯ ಬಾಕಿಯನ್ನು ಬಿದರೆ ಜಿಲ್ಲೆಯಲ್ಲಿ ತಕಾವಿ ಸಾಲದ ಹಣವನ್ನೂ ವಜಾಮಾಡಬೇಕಾಗಿತ್ತು. ಅಲ್ಲಿ ಪೋಲೀಸ್ ಕ್ರಮ ನಡೆದಾಗ ಅದಕ್ಕೆ ಸಂಬಂಧಪಟ್ಟ ರಿಕಾರ್ಡ್‌ಗಳು ನಾಶವಾದ್ದರಿಂದ, ರೈತರನ್ನು ಕೇಳಿದಾಗ ಅವರಿಗೆ ಹಣ ಕಟ್ಟುವುದಕ್ಕೆ ತಕ್ಕ ದಾಖಲಾತು ಇಲ್ಲದೇ ಇದ್ದುದರಿಂದ ಅನಿವಾರ್ಯವಾಗಿ ಕಂದಾಯದ ಬಾಕಿ ವಜಾಮಾಡಬೇಕಾಯಿತು. ಉಳಿದ ಜಿಲ್ಲೆಗಳಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಿನ ಕಾನೂನುಗಳ ಪ್ರಕಾರ ಕಂದಾಯ ಬಾಕಿಯನ್ನು ವಜಾ ಮಾಡುವಂಥ ಪ್ರಸಂಗ ಬಹಳ ಕಡಿಮೆ. 1964 ರ ಕಂದಾಯ ಕಾನೂನು ಪ್ರಕಾರ ಯಾವ್ಯಾವ ಪ್ರಸಂಗದಲ್ಲಿ ರಿಯಾಯತಿ ಕೊಡಬೇಕೋ ಆ ನಿಯಮವನ್ನು ಮಾಡಲಿಲ್ಲ. ಮೊನ್ನೆಮೊನ್ನೆ ಮಾಡಿದ್ದಾರೆ. ರೈತರಿಗೆ ವಿಶೇಷ ಅನುಕೂಲವಾಗಲಿ ಎಂಬುದಾಗಿ ಈ ರೀತಿ ಮಾಡಿದ್ದಾರೆ. ಆದರೂ ಅದರಲ್ಲಿ ಕಂದಾಯದ ಹೊರೆ ಬಹಳ ಆಗುತ್ತದೆ. ಅಭಾವ ಉಂಟಾದರೆ ಕಂದಾಯ ಕೊಡುವುದಕ್ಕೆ ಶಕ್ತಿ ಇಲ್ಲ. ರೈತರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಎಲ್ಲಿ 4 ಆಣೆಗಿಂತ ಕಡಿಮೆ ಬೆಳೆಯಾಗುತ್ತದೋ ಅಂತಹವರಿಗೆ ಕಂದಾಯ ವಜಾ ಮಾಡಬೇಕು ಎಂಬುದಾಗಿ ಒಂದು ಹೊಸ ನಿಯಮವನ್ನು ಮಾಡಿ ಅದರ ಬಗ್ಗೆ ಅನುಮತಿ ಕೊಟ್ಟಿದೆ ಮತ್ತು ಜಾರಿಗೆ ಕೊಟ್ಟಿದೆ ಈ ಪ್ರಕಾರ ಕೆಲವರಿಗೆ ವಿನಾಯತಿಸಿಗುವುದು. ಅದು ಈ ವರ್ಷಕ್ಕೇ ಅಲ್ಲ. 1964ರಿಂದಲೂ ಇಲ್ಲಿಯವರೆಗೆ ವಿನಾಯತಿ ಕೊಡುವ ಪ್ರಶ್ನೆ ಇದೆ, ಕಂದಾಯ ವಸೂಲಿ ವಿನಾಯತಿ

(ಶ್ರೀ ಕೆ. ವಿ. ಶಂಕರಗೌಡ)....

ಕೊಡಬೇಕೆಂಬುದನ್ನು ಸರ್ಕಾರ ಒಪ್ಪಿಕೊಂಡದ್ದು ಬರೀ ಹಾಸನ ಜಿಲ್ಲೆಯಲ್ಲ. ಮೈಸೂರು ರಾಜ್ಯದ 19 ಜಿಲ್ಲೆಯಲ್ಲಿ 1964 ರಿಂದೀಚೆಗೆ ಎಲ್ಲಿ ರೂಪಾಯಿಯಲ್ಲಿ 25 ಪೈಸೆಗಿಂತ ಕಡಿಮೆ ಬೆಳೆಯಾಗಿದ್ದರೆ ಅದಕ್ಕೆ ಅಂತಹವರಿಗೆ ವಿನಾಯಿತಿ ಸಿಗುತ್ತದೆ. ನಾಲ್ಕು ವರ್ಷಗಳವರೆಗೆ ವಿನಾಯಿತಿ ಕೊಡುವ ನಿರ್ಧಾರ ಮಾಡಿದ್ದಾರೆ. ಅದರ ಬಗ್ಗೆ ಪ್ರೊಪೋಸಲ್ಸ್ ಕಳುಹಿಸಿ ಎಂದು ರೆವಿನ್ಯೂ ಅಧಿಕಾರಿಗಳಿಗೂ ಹೇಳಿದ್ದೇವೆ. ರೈತರಿಗೆ ಏನೇನು ವಿನಾಯಿತಿ ಸಿಗಲಿಲ್ಲವೋ ಅವರ ಬಗ್ಗೆ ಅನುಕೂಲ ಮಾಡಿಕೊಡತಕ್ಕ ಪ್ರೊಪೋಜಲ್ಸ್ ಅವರಿಂದ ಕೇಳಿದ್ದೇವೆ. ಅವರಿಂದ ಪ್ರೊಪೋಸಲ್ಸ್ ಬಂದ ನಂತರ ಎಲ್ಲಾ ಜಿಲ್ಲೆಗಳಲ್ಲಿಯೂ ಇಂತಹ ಕಾರಣಗಳಿಂದ ರೈತರಿಗೆ ಪ್ರತಿಫಲ ಸಿಗುವ ವಿಷಯವಾಗಿ ಅನುಕೂಲವಾಗುತ್ತದೆನ್ನುವ ಮಾತನ್ನು ನಾನು ಹೇಳುತ್ತೇನೆ.

ಕಂದಾಯದ ಬಾಕಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಇದೆ. ಇದರಲ್ಲಿ ಆಥರೈಸ್ಡ್ ಅರಿಯರ್ಸ್ ಕೆಲವು ಕಡೆ, ಅನ್ಆಥರೈಸ್ಡ್ ಅರಿಯರ್ಸ್ ಕೆಲವು ಕಡೆ ಇದೆ. 4 ಆಣೆಗಿಂತ ಹೆಚ್ಚಿಗೆ ಬೆಳೆಸು ಆಗಿದ್ದರೂ ಕೆಲವು ಕಡೆ ಕೊಟ್ಟಿಲ್ಲ ಕೆಲವು ಕಡೆ ಕಂದಾಯದ ಬಾಕಿ ವಸೂಲ ಬಹಳ ಉಳಿದಿದೆ. ಹೊಸ ನಿಯಮಾವಳಿ ಪ್ರಕಾರ ವಿನಾಯಿತಿ ಕೊಟ್ಟು ಉಳಿದ ಬಾಗ ವಸೂಲು ಮಾಡುವುದಕ್ಕೆ ಮಾನ್ಯ ಸದಸ್ಯರೂ ಸಾರ್ವಜನಿಕರೂ ಎಲ್ಲರೂ ಸಹಕರಿಸಬೇಕು. ಜನಗಳಲ್ಲಿ ಕಂದಾಯ ಈಗ ಕೊಡದಿದ್ದರೂ ನಡೆದೀತು ಎನ್ನುವ ಭಾವನೆ ಇದೆ. ಆದುದರಿಂದ ಈಗ ಏನು ಕಂದಾಯ ಬಾಕಿ ಇದೆ ಅದನ್ನು ವಸೂಲು ಮಾಡಲು ಎಲ್ಲರೂ ಸಹಕರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇ ಗೌಡ.—ರಿಟರ್ನ್ ಆಫ್ ಮಾಡಿದ್ದಾರೆ ಎನ್ನುವುದನ್ನು ತಪ್ಪು ಕಲ್ಪನೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ರಿಟನ್ ಆಫ್ ಮತ್ತು ಸಸ್ಪೆನ್‌ಷನ್ ಏನು ಎನ್ನುವುದು ನನಗೆ ಅರ್ಥವಾಗುತ್ತದೆ. ರಿಟನ್ ಆಫ್ ಎಷ್ಟು ಎಂದು ನಾನು ತಿಳಿದುಕೊಂಡಿದ್ದೇನೆ. ಡೆಪ್ಯೂಟಿ ಕಮೀಷನರು ಅಲ್ಲಿ 4 ಆಣೆ ಬೆಳೆ ಕಡಿಮೆ ಇದೆ ಎಂದು ಸುಮಾರು 8 ಲಕ್ಷ ರೂಪಾಯಿನ ವರೆಗೆ ರಿಟನ್ ಆಫ್ ಮಾಡಬೇಕು ಎಂದು ರಿಪೋರ್ಟನ್ನು ಕಳುಹಿಸಿದ್ದಾರೆ.

ಶ್ರೀ ಜಿ. ಬಿ. ಶಂಕರ ರಾವ್.—ರೆಮಿಷನ್ ಎಂದರೆ ಕಾನೂನು ಪ್ರಕಾರ ಅವರಿಗೆ ಏನು ವಿನಾಯಿತಿ ಕೊಡಬೇಕು ಅದು. ರಿಟನ್ ಆಫ್ ಎಂದರೆ ವಸೂಲು ಮಾಡುವುದಕ್ಕೆ ಬಾರದೇ ಇದ್ದಂಥ ಬಾಕಿಯನ್ನು ಸರ್ಕಾರಕ್ಕೆ ಬರುವುದಿಲ್ಲ ಎಂದು ನಿಶ್ಚಿತವಾದ ಮೇಲೆ ಅದನ್ನು ರಿಟನ್ ಆಫ್ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಹೇಳಿದ್ದು ಬೆಳೆ ಆಗದಿದ್ದರೆ ಯಾವ ರೈತನಿಗೆ ಕಂದಾಯ ಕೊಡುವುದಕ್ಕೆ ಇತ್ತು, ಯಾವ ರೈತನಿಗೆ ಕೊಡುವುದಕ್ಕೆ ಶಕ್ತಿ ಇತ್ತೋ ಅಲ್ಲಿ ಸರ್ಕಾರದ ಕಾನೂನನ್ನು ಉಲ್ಲಂಘನೆ ಮಾಡುತ್ತಾರೆ, ಅದನ್ನು ರೈಟ್ ಆಫ್ ಮಾಡುವುದಕ್ಕಾಗುವುದಿಲ್ಲ. ಬೆಳೆ ಕೆಟ್ಟಿದ್ದರೂ ಕೂಡ, 4 ಆಣೆಗಿಂತ ಕಡಿಮೆ ಇದ್ದರೂ ಕೂಡ ಈ ಅಧಿಕಾರಿಗಳು ಪುಷ್ಟೀಕರಿಸಿ ಅದನ್ನು ರೆಮಿಷನ್ ಮಾಡಿಸಿ ಎಂದು ಹೇಳುತ್ತಾರೆ. ಹಾಸನ ಜಿಲ್ಲೆಯಲ್ಲಿ 8 ಲಕ್ಷ ರೂಪಾಯಿನವರೆಗೆ ರೆಮಿಷನ್ ಕೊಡಿ, 4 ಆಣೆಗಿಂತಲೂ ಬೆಳೆ ಕಡಿಮೆ ಇದೆ ಎಂದು ಡೆಪ್ಯೂಟಿ ಕಮೀಷನರು, ನಿಮ್ಮ ಅಧಿಕಾರಿಗಳು ಬರೆದರೂ ಕಂದಾಯವನ್ನು ವಸೂಲು ಮಾಡುವಂಥ ನಿದರ್ಶನಗಳು ಇವೆ. ನಾನು ಅಲಿಗೇಷನ್ ಮಾಡುತ್ತಾ ಇಲ್ಲ.

ಶ್ರೀ ಜಿ. ಬಿ. ಶಂಕರ ರಾವ್.—ನಮ್ಮ ರೆವಿನ್ಯೂ ಅಧಿಕಾರಿಗಳಿಂದ ಬಂದಿರುವ ಸಲಹೆಗಳು ಅಷ್ಟು ಪರಿಪೂರ್ಣ ಆಗಿರಲಿಲ್ಲ. ಅದನ್ನು ವಾಪಸ್ಸು ಕಳುಹಿಸಿ ಪುನಃ ಸರಿಯಾದ ಪ್ರಪೋಸಲ್ಸ್ ಕಳುಹಿಸಿ ಎಂದು ಹೇಳಿದ್ದೇವೆ. ಮಾನ್ಯ ಸದಸ್ಯರಿಗೆ ಹೇಳುವುದು ಏನೆಂದರೆ ಎಲ್ಲಿ 4 ಆಣೆಗಿಂತ ಬೆಳೆ ಕಡಿಮೆ ಇದ್ದಂಥ ಪ್ರದೇಶದಲ್ಲಿ ರೈತನಿಗೆ ಕಂದಾಯ ಕೊಡುವುದಕ್ಕೆ ಸಾಧ್ಯವಾಗಿಲ್ಲ ಅಂಥ ಕಡೆಯಲ್ಲಿ 4 ವರ್ಷದ ರೆಮಿಷನ್ ಕೊಡುತ್ತೇವೆ ಎಂದು ಹೇಳುತ್ತೇವೆ.

Sri DIGAMBAR RAO B. KALMANKAR —The Deputy Minister has admitted that in Bidar there are many Inam and Jahgir lands and that the rate of land revenue is high. In view of the fact that Government have been writing off arrears of land revenue, I want to bring to the notice of the Hon'ble Deputy Minister that the reasons which made them to revise their policy in Bidar, are equally good for Raichur and

Gulbarga. Even in respect of Raichur and Gulbarga, I wish the Minister takes pains to call for records, and go round and see whether there are not such Inam and Jahgir lands and other type of lands which are having very exorbitant land revenue and the benefits given to Bidar are given to Gulbarga and Raichur also. This matter should be seriously examined and the same benefits given to both Gulbarga and Raichur. Otherwise, there will be discrimination.

Compared to the existing land revenue rates in the old Mysore area, the rates in Hyderabad Karnatak area are high. In Hyderabad Karnatak area and Bombay Karnatak area, lands are not classified into various types; thereby also, lot of injustice is done to the Hyderabad Karnatak area. It is particularly so in case of Inam lands which were being levied land revenue many more times than the land revenue for patta lands. I want to know whether the Covernment will consider the writting off of land revenue of such Inam lands in Gulbarga and Raichur and also reconsider the fixing of the land revenue on the lands in Hyderabad Karnatak area in view of the clasification of of lands that is to be made to introduce uniformity in the State.

Thirdly, with respect to my question regarding the small holders, may I know whether the Government has taken pains to ascertain as to how much land revenue is collected from small lands varying between 5 to 10 acres. These are all dry lands producing negligible quantity of jowar. Will Government state its present policy in regard to its earleir declaration and stand for abolition of land revenue. Will Government give the benefit of abolition of land revenue to such petty landholders who are not in a position to pay land revenue ?

ಶ್ರೀ ಜಿ. ಬಿ. ಶಂಕರರಾವ್.—ಸರ್ಕಾರಕ್ಕೆ ಬರುವಂಥಾ ಬಾಕಿ ಎಂದರೆ ತಕಾವಿ ಲೋನುಗಳು ಇನ್ನೂ ಇತರ ಡ್ಯೂಸ್ ಏನು ಇವೆ ಅವು ಕಾನೂನು ಪ್ರಕಾರ ವಸೂಲ್ಮಾಡುವುದಕ್ಕೂ ಬರುತ್ತದೆ, ವಿನಾಯಿತಿ ಕೊಡುವುದಕ್ಕೂ ಬರುತ್ತದೆ. ಎಲ್ಲಿ ಸರ್ಕಾರಕ್ಕೆ ಬರತಕ್ಕಂಥ ಇತರ ಬಾಬುಗಳಿಂದ ವಸೂಲ್ ಆಗತಕ್ಕದ್ದು ಏನು ಇದೆ ಅಲ್ಲ ನಿಯಮಾವಳಿ ಪ್ರಕಾರ ವಸೂಲ್ಮಾಡುವುದಕ್ಕೆ ಸಾಧ್ಯ ಇಲ್ಲ. ಅದರ ವಿಚಾರ ಹೇಳುತ್ತಿರುವುದು. ಹಳೇ ಬಾಕಿ ಬಗ್ಗೆ ಅದಕ್ಕೆ ಸಂಬಂಧಪಟ್ಟ ರಿಕಾರ್ಡ್ಸ್ ಇಲ್ಲ, ಪೋಲೀಸ್ ಆಕ್ಷನ್‌ನಲ್ಲಿ ಹೋಗಿಬಿಟ್ಟವು.

ಶ್ರೀ ಡಿ. ಬಿ. ಕಲ್ಮನಕರ್.—ಈ ಕನ್ಸಿಡರೇಷನ್ ಇರತಕ್ಕ ಪೀರಿಯಡ್ 1962–63.

ಶ್ರೀ ಜಿ. ಬಿ. ಶಂಕರರಾವ್.—ನಾನು ಮೊದಲೇ ಹೇಳಿದ್ದೇನೆ. ನಾವು ವಸೂಲ್ಮಾಡುವುದಕ್ಕೆ ಪ್ರಯತ್ನಪಟ್ಟಾಗ್ಯೂ ಕೂಡ ಆಗದೆ ಇದನ್ನು ಅನಿವಾರ್ಯವಾಗಿ ರಿಟನ್ ಆಫ್ ಮಾಡಬೇಕಾಯಿತು. ಆದರೆ ರೈಟ್ ಆಫ್ ಪ್ರಸಂಗ ಬರುವುದಿಲ್ಲ. ಇದರ ಬಗ್ಗೆ ವಿನಾಯಿತಿ ಕೊಡುವುದು ಲ್ಯಾಂಡ್ ರೆವಿನ್ಯೂ ಬಾಕಿ ಬಗ್ಗೆ ಸದಸ್ಯರು ಹೇಳಿದರು. ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಯಲ್ಲಿ ಕಂದಾಯ ಬಹಳ ವರ್ಷದಿಂದ ವಸೂಲು ಆಗಿದೆ. ಕಂದಾಯ ಜಾಸ್ತಿ ಇದೆ ಎಂದು ಇಲ್ಲಿಯವರೆಗೂ ಅಂತಹ ಪ್ರಸಂಗ ಬಂದಿಲ್ಲ. ಕಂದಾಯ ಕೊಟ್ಟುಬಿಟ್ಟಿದ್ದಾರೆ. ರೈಟ್ ಆಫ್ ಪ್ರಸಂಗ ಬರುವುದಿಲ್ಲ.

ಇನ್ನು ಸಣ್ಣ ಹಿಡುವಳಿದಾರರಿಗೆ ಏಕೆ ವಜಾ ಮಾಡಬಾರದು ಎಂದು ಕೇಳಿದ್ದಾರೆ. ಹೀಗೆ ಆಲೋಚನೆ ಮಾಡುತ್ತಾ ಹೋದರೆ ಸಣ್ಣ ಹಿಡುವಳಿದಾರರಿಗೆ ಎಷ್ಟು ಎಕರೆಯವರೆಗೆ ಕೊಡಬೇಕು ಎನ್ನುವ ಪ್ರಸಂಗ ಬಂದರೆ 2–3 ವರ್ಷದಿಂದ ಈ ಮಾನ್ಯ ಸಭೆ ಪಾಸ್ ಮಾಡಿದ Prevention of Fragmentation and Consolidation of Holdings ಇದರ ಉದ್ದೇಶ ಏನು ಇತ್ತೋ ಅದು ಪೂರ್ಣ ನಿಷ್ಫಲವಾಗುತ್ತದೆ. ವ್ಯವಸಾಯದ ಹಿಡುವಳಿ ಹೆಚ್ಚಾಗಬೇಕು, ಇದನ್ನು ಪುನಃ ಪುನಃ ಸಣ್ಣ ಸಣ್ಣ ಹಿಡುವಳಿದಾರರಿಗೆ ಕಂದಾಯ ಗೊತ್ತು ಮಾಡಬೇಕು ಎಂದರೆ ಅವೆಲ್ಲಾ ತುಂಡು ತುಂಡಾಗುತ್ತದೆ. ಇದು ಸಾಧ್ಯವಾಗುವುದಿಲ್ಲ. ಆದುದರಿಂದ ಇದನ್ನು ಸರ್ಕಾರದವರು ಸ್ಕ್ರೈಬಿಟ್ಟಿದ್ದಾರೆ. ಮೈಸೂರು ದೇಶದಲ್ಲಿ ರೀಕ್ಲಾಸಿಫಿಕೇಷನ್ ಕೆಲವು ಕಡೆ ಆಗಿದೆ ಬೇರೆ ಕಡೆ ಆದಾಗ ಎಲ್ಲಾ

(ಶ್ರೀ ಜಿ. ಬಿ. ಶಂಕರರಾವ್)

ಕಡೆಯೂ ಭೂಕಂಧಾಯದ ರೇಟು ಒಂದೇ ಯೂನಿಫಾರ್ಮಿಟಿ ಇರಬೇಕು ಎಂದು ಮಾಡಿದ್ದೇವೆ. ಒಂದು ಕಡೆ ಹೆಚ್ಚು, ಒಂದು ಕಡೆ ಕಡಿಮೆ ಎನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಒಂದು ವಿಶಿಷ್ಟ ಸಂದರ್ಭದಲ್ಲಿ ಏನಾದರೂ ಅನ್ಯಾಯವಾಗಿದೆ ಎಂದು ಕಂಡು ಬಂದರೆ ಸರ್ಕಾರದವರು ಪರಿಶೀಲನೆ ಮಾಡಲಿಕ್ಕೆ ಸಿದ್ಧ ಇದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ (ಅನೇಕಲ್).—4 ವರ್ಷಗಳಿಗೂ ಮೇಲ್ಪಟ್ಟು 4 ಆಣೆ ಕೂಡ ಬೆಳೆಯಾಗದ ಭೂಮಿಗಳಿಗೆ ಕಂದಾಯವನ್ನು ಮಾಫಿಮಾಡಲಾಗುತ್ತದೆಂದು ಈಗ ತಾನೆ ಮಾನ್ಯ ಸಚಿವರು ತಿಳಿಸಿದರು. ಅದೇ ರೀತಿ ನಮ್ಮ ಅನೇಕಲ್ ತಾಲ್ಲೂಕಿನಲ್ಲೂ ಕಳೆದ 4 ವರ್ಷಗಳಿಂದ 4 ಆಣೆಗಿಂತ ಬಹಳ ಕಡಮೆ ಬೆಳೆಯಾಗಿದೆ ಎಂದು ಜಿಲ್ಲಾಧಿಕಾರಿಗಳು ವರದಿಯನ್ನು ಕಳುಹಿಸಿದಾಗ್ಯೂ ಮತ್ತು ಸರ್ಕಾರದವರು ಆ ತಾಲ್ಲೂಕಿನಲ್ಲಿ ಕಂದಾಯ ಎತ್ತಬಾರದೆಂದು ಆಜ್ಞೆ ಮಾಡಿದೆ ಎಂಬುದಾಗಿ ಪತ್ರಿಕೆಗಳಲ್ಲಿ ವಿಚಾರ ಬರುತ್ತಿದ್ದಾಗ್ಯೂ ಅಲ್ಲಿರತಕ್ಕ ಸ್ಥಳೀಯ ಅಧಿಕಾರಿಗಳು ಆ ಬಡಜನರನ್ನು ಕಂದಾಯ ಕೊಡಲು ಒತ್ತಾಯ ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಯಾವ ರೀತಿ ಪರಿಹಾರವನ್ನು ಒದಗಿಸಬೇಕೆಂದಿದೆ?

ಶ್ರೀ ಜಿ. ಬಿ. ಶಂಕರರಾವ್.—ಸಾಧಾರಣವಾಗಿ ಸರ್ಕಾರದವರು ಮಾಡಿರತಕ್ಕ ನಿಯಮಾವಳಿಗಳನ್ನು ಎಲ್ಲಾ ಕಡೆಗಳಲ್ಲೂ ರಿಟ್ರಾಸ್ಪೆಕ್ಟೀವಾಗಿ ಜಾರಿಗೆ ಕೊಡಬೇಕೆಂದು ತೀರ್ಮಾನ ಮಾಡಿರುವುದರಿಂದ ಯಾವ ಸದಸ್ಯರೂ ಇದರ ಬಗ್ಗೆ ಯಾವ ಸಂಶಯವನ್ನು ಪಡಬೇಕಾದ್ದಿಲ್ಲ. ಸರ್ಕಾರದವರೀಗ ಎಲ್ಲ ಕಡೆಗಳಿಂದ ರೆಕಾರ್ಡುಗಳನ್ನು ಕಾಲಫಾರ್ ಮಾಡಿದ್ದಾರೆ. ನಿಸ್ಸಹಾಯ ಸ್ಥಿತಿಯಲ್ಲಿರತಕ್ಕ ರೈತರು ಆ ಅನೆಕಲ್ ಒಂದರಲ್ಲೇ ಅಲ್ಲ ಇಡೀ ರಾಜ್ಯಾದ್ಯಂತವೂ ಇದ್ದಾರೆ. ಅವರಿಗೆ ಆ ನಿಯಮಾವಳಿಗಳ ಪ್ರಕಾರ ಏನು ಕಂದಾಯದ ರಿಮಿಷನ್ ಆಗಬೇಕೋ ಆದಾಗುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮಾನ್ಯ ಸಚಿವರು 1964 ರಿಂದ ಇಲ್ಲಿಯವರೆಗೂ ಎಲ್ಲೆಲ್ಲಿ 4 ಆಣೆ ಬೆಳೆ ಕೂಡ ಆಗಿಲ್ಲವೋ ಅಥವಾ ಕಡಮೆ ಬೆಳೆಯಾಗಿದೆಯೋ ಅಂಥ ಪ್ರದೇಶಕ್ಕೆಲ್ಲ ಕಂದಾಯದ ವಿನಾಯಿತಿ ಕೊಡಬೇಕು ಎಂಬ ವಿಚಾರವನ್ನು ತಿಳಿಸಿದ್ದಾರೆ. ಇದೇ ವಿಚಾರದಲ್ಲಿ ಹಿಂದೆ ನಮ್ಮ ಮೈಸೂರು ರಾಜ್ಯದಲ್ಲಿ ಒಂದು ಆಜ್ಞೆ ಆಯಿತು. ಆ ಆಜ್ಞೆಯಲ್ಲಿ ರಾಜ್ಯದ ಎಲ್ಲಾ ಭಾಗಗಳೂ ಸೇರಿದ್ದರೂ ಅದೇಕೆ ನಮ್ಮ ಹಾಸನ ಜಿಲ್ಲೆ ಅದರಲ್ಲಿ ಕೈಬಿಟ್ಟು ಹೋಯಿತೋ ಗೊತ್ತಾಗುವುದಿಲ್ಲ. ಹೀಗಿರುವಾಗ ಸರ್ಕಾರದವರು ಈ ಕಂದಾಯ ರೈಟಾಫ್ ಮಾಡತಕ್ಕ ಬಗ್ಗೆ ಯಾವ ಯಾವ ವಿಧಾನಗಳನ್ನು ಅನುಸರಿಸುತ್ತಾರೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೋ?

ಶ್ರೀ ಜಿ. ಬಿ. ಶಂಕರರಾವ್.—ನಾನು ಕಂದಾಯವನ್ನು ರೈಟಾಫ್ ಮಾಡಿದ ವಿಚಾರ ಹೇಳಲಿಲ್ಲ. ಆದರೆ ಬೀದಾರ್ ಜಿಲ್ಲೆಯಲ್ಲಿ ಆ ಪೋಲೀಸ್ ಆಕ್ಷನ್ ಆದ ಕಾಲಕ್ಕೆ ಅನೇಕ ದಾಖಲೆಗಳು ಕಳೆದು ಹೋದವು. ಅಲ್ಲಿದ್ದ ನಮಗೆ ಯಾರೂ ಸಾಲ ಕೊಟ್ಟಿರಲಿಲ್ಲ ಎಂದು ಹೇಳಿದರು. ಅಂಥಾ ಒಂದು ಅನಿವಾರ್ಯ ಸಂದರ್ಭದಲ್ಲಿ ಅಲ್ಲಿಯ ಜನರಿಂದ ಬರಬೇಕಾಗಿದ್ದ ತಕಾವಿ ಸಾಲ ಇತ್ಯಾದಿಗಳನ್ನು ಮಾತ್ರ ರೈಟಾಫ್ ಮಾಡಲಾಯಿತು. ಇನ್ನು ಹಾಸನ ಜಿಲ್ಲೆಗೇಕೆ ವಿನಾಯಿತಿ ಕೊಡಲಿಲ್ಲ ಎಂದು ಕೇಳಿರತಕ್ಕ ಪ್ರಶ್ನೆಗೆ ನಾವು ಎಲ್ಲ ಕಡೆಗಳಿಂದ ರೆಕಾರ್ಡ್‌ನ್ನು ಕಾಲ್‌ಫಾರ್ ಮಾಡಿದ್ದೇವೆ. ಅವಿನ್ನೂ ಬಂದಿಲ್ಲ. ಎಲ್ಲ ಜಿಲ್ಲೆಯಿಂದಲೂ ರೆಕಾರ್ಡುಗಳನ್ನು ತರಿಸಿ ಅದನ್ನು ರೈಟಾಫ್ ಮಾಡತಕ್ಕ ವಿಚಾರವನ್ನು ಹೇಳಿದ್ದೇನೆ. ಅದನ್ನು ರಿಟ್ರಾಸ್ಪೆಕ್ಟೀವಾಗಿ ಮಾಡಬೇಕೆಂದು ಹೇಳಿದ್ದೇವೆ. ಹಾಗಿರುವಾಗ ಹಾಸನ ಜಿಲ್ಲೆಯನ್ನು ಕೈಬಿಡತಕ್ಕ ಪ್ರಶ್ನೆಯೆಲ್ಲಿ ಉದ್ಭವಿಸುತ್ತದೆ?

Mr. DEPUTY SPEAKER.—The House will now adjourn and meet on Monday at 12 Noon.

The House adjourned at Fifty-five Minutes past One of the Clock to meet again at Twelve of the Clock on Monday, the 15th April 1968.